# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 25
ಪಿಡಬ್ಲ್ಯೂ: 05

**<u>ದಿನಾಂಕ: 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿದಾರರ ಹೆಸರು : ಬಸವರಾಜ್

ತಂದೆಯ ಹೆಸರು : ದ್ಯಾಮಪ್ಪ

ವಯಸ್ಸು : 33 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬೆಣ್ಣೆಹಳ್ಳಿ

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>**

ಅಸಾ–**1** ಕರಿಯಪ್ಪ ಗೊತ್ತು. ಅವರ ಮಗಳು ಸುಮ ಗೊತ್ತು. ಆಕೆಯನ್ನು ಆರೋಪಿ ನಾರಪ್ಪನಿಗೆ ಕೊಟ್ಟು ಸಿರಿಗೆರೆಯಲ್ಲಿ ಸಮೂಹಿಕ ವಿವಾಹದಲ್ಲಿ ಮದುವೆ ಮಾಡಿದ್ದರು. ಮದುವೆಯಾದ ನಂತರ ಗಂಡ ಹೆಂಡತಿ ಆರೋಪಿಯ ಮನೆಯಾದ ಕೊಣನೂರಿನಲ್ಲಿ ವಾಸವಿದ್ದರು. **3–4** ವರ್ಷ ಗಂಡ ಹೆಂಡತಿ ಚೆನ್ನಾಗಿದ್ದರು. ಅವರಿಗೆ ಒಂದು ಗಂಡು ಮಗು ಇದೆ. ಆ ಮಗುವಿನ ವಯಸ್ಸು **5** ವರ್ಷ. ಗಂಡ, ಹೆಂಡತಿ ಮತ್ತು ಮಗು ಆ ಮನೆಯಲ್ಲಿ ವಾಸವಿದ್ದರು.

**2.** ಆರೋಪಿ ಚಿತ್ರದುರ್ಗದಲ್ಲಿ ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಆದರೆ ಮನೆಗೆ ಏನೂ ತಂದು ಹಾಕುತ್ತಿರಲಿಲ್ಲ. ಆರೋಪಿ ತನ್ನ ದುಡಿಮೆಯನ್ನೆಲ್ಲಾ ಕುಡಿತ, ಜೂಜಾಟ, ಒಸಿ ಆಟಕ್ಕೆ ಹಾಕುತ್ತಿದ್ದಾನೆಂದು ಕರಿಯಪ್ಪ ನನಗೆ ಹೇಳಿದ್ದರು. ಆರೋಪಿ ಕುಡಿದು ಬಂದು ಸುಮಾಳಿಗೆ ನಾನು ಏನೂ ತಂದು ಹಾಕುವುದಿಲ್ಲ, ನೀನು ದುಡಿದು ಸಾಕಿಕೋ, ನಿಮ್ಮ ಅಪ್ಪನ ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿ ಹಿಂಸೆ ಕೊಡುತ್ತಿದ್ದಾನೆಂದು ಕರಿಯಪ್ಪ ಹೇಳಿದ್ದರು. ನಾವು ಹೋಗಿ ಬುದ್ದಿ ಹೇಳಿ ಬರಬೇಕು ಎಂದು ಅಂದುಕೊಂಡಿದ್ದೆವು. ಅಷ್ಟರಲ್ಲಿ ಆಕೆಯ ಕೊಲೆಯಾಗಿದೆ ಎಂದು ವಿಷಯ ಗೊತ್ತಾಯಿತು.

**3.** ದಿನಾಂಕಃ **06–01–2022** ರಂದು ರಾತ್ರಿ ಸುಮಾಳ ಕೊಲೆ ವಿಷಯ ನನಗೆ ಗೊತ್ತಾಯಿತು. ಮರು ದಿನ **07–01–2022** ರಂದು ನಾನು ಮತ್ತು ಊರಿನವರು ಇನ್ನೂ ಕೆಲವು ಜನ ಕೋಣನೂರಿಗೆ ಹೋದೆವು. ಅಲ್ಲಿ ಪೊಲೀಸರು ಮತ್ತು ಸಾರ್ವಜನಿಕರು ಆರೋಪಿಯ ಮನೆ ಹತ್ತಿರ ಸೇರಿದ್ದರು. ಎ.ಸಿ.ಯವರು ಬಂದರು. ಮನೆಯ ಬೀಗ ತೆಗೆದು ಒಳಗೆ ಹೋದರು. ಮಂಚದ ಕೆಳಗೆ ಕಡಪಾ ಕಲ್ಲಿನ ಮೇಲೆ ಸಿಮೆಂಟ್ ಹಾಕಿತ್ತು, ಕಡಪಾ ಕಲ್ಲು ಸ್ವಲ್ಪ ಮೇಲೆ ಎದ್ದಿತ್ತು. ಸಿಮೆಂಟ್ ಕಡಪಾ ಕಲ್ಲನ್ನು ತೆಗೆದು ಅಗೆದು ನೋಡಿದಾಗ ಒಳಗೆ ಶವ ಇತ್ತು. ಶವವನ್ನು ಹೊರಗೆ ತೆಗೆದರು. ಅದು ಸುಮಾಳ ಶವ ಆಗಿತ್ತು. ಆಕೆಯ ಮುಖ ಕೊಳೆತು ಹೋಗಿತ್ತು, ತಲೆಯ ಹಿಂದುಗಡೆ ರಕ್ತಗಾಯ ಇದ್ದುದ್ದು ಕಂಡುಬಂದಿತ್ತು. ಕಬ್ಬಿಣದ ರಾಡು ಮತ್ತು ಒನಕೆಯಿಂದ ಹೊಡೆದು ಕೊಲೆ ಮಾಡಿದ್ದಾನೆಂದು ತಿಳಿದು ಬಂದಿತ್ತು. ಕೈಕಾಲುಗಳು ಬಾವು ಬಂದಿದ್ದವು. ವರದಕ್ಷಿಣೆ ವಿಷಯವಾಗಿ ತಂದೆಯ ಮನೆಗೆ ಹೋಗಿ ದುಡ್ಡು ತೆಗೆದುಕೊಂಡು ಬಾ ಎಂದು ಹಿಂಸೆ ಕೊಟ್ಟು ಆರೋಪಿ ಸುಮಾಳಿಗೆ ಕೊಲೆ ಮಾಡಿದ್ದ. ವಿಸಿ ಮೂಲಕ ಆರೋಪಿ ನಾರಪ್ಪನನ್ನು ನೋಡಿ ಗುರುತಿಸುತ್ತಿದ್ದೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.